ಕರ್ತವ್ಯ ನಿರ್ವಹಿಸುತ್ತಿರುವ ಮಹಿಳಾ ವೈದ್ಯರು – 265
ಖಾಲಿ ಇರುವ ಮಹಿಳಾ ವೈದ್ಯರ ಹುದ್ದೆಗಳು – 87

ಆ) ಜಿಲ್ಲಾ ಮಟ್ಟದಲ್ಲಿ ಗುತ್ತಿಗೆ ಆಧಾರದ ಮೇಲೆ ವೈದ್ಯರನ್ನು ನೇಮಿಸಿಕೊಳ್ಳಲು ಜಿಲ್ಲಾಧಿಕಾರಿಗಳಿಗೆ ಅಧಿಕಾರ ನೀಡಲಾಗಿದೆ ಹಾಗೂ ಈ ಕೊರತೆಯನ್ನು ನೀಗಿಸಲು ವಿಶೇಷ ನೇಮಕಾತಿ ನಿಯಮಗಳ ಅಂತಿಮ ಅಧಿಸೂಚನೆಯ ನಂತರ ರಾಜ್ಯದಲ್ಲಿ ಖಾಲಿ ಇರುವ 500 ವೈದ್ಯರ ಹುದ್ದೆಗಳನ್ನು ಎರಡು ಹಂತದಲ್ಲಿ ನೇರ ನೇಮಕಾತಿ ಮೂಲಕ ಭರ್ತಿ ಮಾಡಲು ಕ್ರಮ ಕೈಗೊಳ್ಳಲಾಗುವುದು.

ಗ್ರಾಮೀಣ ಪ್ರದೇಶದಲ್ಲಿ ಕರ್ತವ್ಯ ನಿರ್ವಹಿಸಲು ಗುತ್ತಿಗೆ ಮಹಿಳಾ ವೈದ್ಯರುಗಳು ಮುಂದೆ ಬರುತ್ತಿಲ್ಲ. ಆದರೆ ನೇಮಕಾತಿ ಮಾಡಿಕೊಳ್ಳುವಾಗ ಸರ್ಕಾರಿ ಆದೇಶದ ಪ್ರಕಾರ ಮಹಿಳಾ ಮೀಸಲಾತಿಯಂತೆ ಶೇಕಡಾ 30% ರಷ್ಟು ಮಹಿಳಾ ವೈದ್ಯರನ್ನು ಖಾಲಿ ಇರುವ ಹುದ್ದೆಗಳಿಗೆ ಭರ್ತಿ ಮಾಡಲಾಗುವುದು.

1312(692) ಶ್ರೀ ಕ್ಯಾತಸಂದ್ರ ಎನ್ ರಾಜಣ್ಣ (ಬೆಳ್ಳಾವಿ) : ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಕೇಂದ್ರ ಸರ್ಕಾರ ಯೋಜನೆಯನ್ವಯ ರಾಜ್ಯ ಸರ್ಕಾರಕ್ಕೆ ಕಳೆದ 3 ವರ್ಷಗಳಲ್ಲಿ ಬರಬೇಕಾದ ಅನುದಾನ ಬಂದಿದೆಯೇ:

ಆ) ಹಾಗಿದ್ದಲ್ಲಿ ಅದಕ್ಕೆ ಕಾರಣಗಳೇನು (ಈ ಬಗ್ಗೆ ವಿವರ ನೀಡುವುದು)?

ಶ್ರೀ ಬಾಲಚಂದ್ರ ಲ. ಜಾರಕಿಹೊಳಿ (ಸಮಾಜ ಕಲ್ಯಾಣ ಸಚಿವರು) :

ಅ) **ಸಮಾಜ ಕಲ್ಯಾಣ ಇಲಾಖೆ:**

ಕಳೆದ 3 ವರ್ಷಗಳಲ್ಲಿ ಬಿಡುಗಡೆಯಾದ ಅನುದಾನದ ಸಂಪೂರ್ಣ ವಿವರಗಳನ್ನು ಅನುಬಂಧದಲ್ಲಿ ವಿವರಿಸಿದೆ.

ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ:

ಕಳೆದ 3 ವರ್ಷಗಳಲ್ಲಿ ಕೇಂದ್ರ ಯೋಜನೆಯನ್ವಯ ರಾಜ್ಯ ಸರ್ಕಾರಕ್ಕೆ ಬಂದ ಅನುದಾನದ ವಿವರ ಈ ಕೆಳಗಿನಂತಿದೆ.

(ಲಕ್ಷ ರೂ.ಗಳು)

ಕಾರ್ಯಕ್ರಮಗಳು	03-04	04-05	05-06
ತರಬೇತಿ ಮತ್ತು ಸಂಬಂಧಿತ ಕಾರ್ಯಕ್ರಮಗಳು	–	1.92	–
ಸಂಶೋಧನೆ ಮತ್ತು ತರಬೇತಿ	–	2.00	17.30
ಪುಸ್ತಕ ಭಂಡಾರ	20.00	–	20.00
ಆಶ್ರಮ ಶಾಲೆಗಳ ಕಟ್ಟಡ ನಿರ್ಮಾಣ	–	77.51	150.00
ವಿದ್ಯಾರ್ಥಿನಿಲಯಗಳ ಕಟ್ಟಡ ನಿರ್ಮಾಣ	150.00	120.00	86.00
ಮೆಟ್ರಿಕ್ ನಂತರದ ವಿದ್ಯಾರ್ಥಿವೇತನ	–	400.00	2000.51
ವಿಶೇಷ ಕೇಂದ್ರೀಯ ಸಹಾಯಧನ	694.19	899.97	1029.06
ಭಾರತ ಸಂವಿಧಾನ ಅನುಚ್ಛೇಧ 275(1) ರಡಿ ಅನುದಾನ	700.00	957.88	1131.19
ಪರಿಶಿಷ್ಟ ವರ್ಗದವರಿಗೆ ಅಂತರರಾಜ್ಯ ಪ್ರವಾಸ ಕಾರ್ಯಕ್ರಮ	–	–	4.36
ಶೈಕ್ಷಣಿಕ ಸಂಕೀರ್ಣ	–	–	140.13
ಏಕಲವ್ಯ ಮಾದರಿ ವಸತಿ ಶಾಲೆ	97.00	–	247.63
ಆದಿವಾಸಿ ಪಂಗಡದ ಅಭಿವೃದ್ಧಿ	38.90	25.00	67.40
ಲ್ಯಾಂಪ್ಸ್ ಫೆಡರೇಷನ್ ಸಹಾಯಧನ	–	–	80.00
ವೃತ್ತಿ ತರಬೇತಿ	–	66.73	68.27
ಒಟ್ಟು	1698.09	2484.28	5041.85

ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ:

	2003-04		2004-05		2005-06	
	ಕೇಂದ್ರ ಸರ್ಕಾರಕ್ಕೆ ಸಲ್ಲಿಸಿದ ಪ್ರಸ್ತಾವನೆ ಮೊತ್ತ	ಕೇಂದ್ರ ಸರ್ಕಾರ ನೀಡಿರುವ ಅನುದಾನದ ಮೊತ್ತ	ಕೇಂದ್ರ ಸರ್ಕಾರಕ್ಕೆ ಸಲ್ಲಿಸಿದ ಪ್ರಸ್ತಾವನೆ ಮೊತ್ತ	ಕೇಂದ್ರ ಸರ್ಕಾರ ನೀಡಿರುವ ಅನುದಾನದ ಮೊತ್ತ	ಕೇಂದ್ರ ಸರ್ಕಾರಕ್ಕೆ ಸಲ್ಲಿಸಿದ ಪ್ರಸ್ತಾವನೆ ಮೊತ್ತ	ಕೇಂದ್ರ ಸರ್ಕಾರ ನೀಡಿರುವ ಅನುದಾನದ ಮೊತ್ತ
ಮೆಟ್ರಿಕ್ ಪೂರ್ವ ವಿದ್ಯಾರ್ಥಿ ವೇತನ 50:50	331.92	26.56	918.68	–	1161.35	ಇಲ್ಲ
ಮೆಟ್ರಿಕ್ ನಂತರದ ವಿದ್ಯಾರ್ಥಿ ವೇತನ 100%	584.28	187.25	670.35	248.45	3010.61	ಇಲ್ಲ
ವಿದ್ಯಾರ್ಥಿನಿಲಯಗಳ ಕಟ್ಟಡ ನಿರ್ಮಾಣ 50:50	253.05	253.05	250.33	–	258.75	258.75

ಕೇಂದ್ರ ಸರ್ಕಾರದ ಯೋಜನೆಯನ್ವಯ ಮೆಟ್ರಿಕ್ ಪೂರ್ವ ವಿದ್ಯಾರ್ಥಿವೇತನ /ಮೆಟ್ರಿಕ್ ನಂತರದ ವಿದ್ಯಾರ್ಥಿವೇತನ ನಿಗಧಿತ ಪ್ರಮಾಣದಂತೆ ಬಿಡುಗಡೆಯಾಗಿರುವುದಿಲ್ಲ. ಅಲ್ಲದೇ ಮೆಟ್ರಿಕ್ ವಿದ್ಯಾರ್ಥಿವೇತನಕ್ಕೆ ಕೇಂದ್ರ ಸರ್ಕಾರದ ಅನುದಾನವು 2004–05 ಮತ್ತು 2005–06ನೇ ಸಾಲಿನಲ್ಲಿ ಬಿಡುಗಡೆಯಾಗಿರುವುದಿಲ್ಲ. ಅದೇ ರೀತಿ ಮೆಟ್ರಿಕ್ ನಂತರದ ವಿದ್ಯಾರ್ಥಿವೇತನವು 2005–06ರಲ್ಲಿ ಬಿಡುಗಡೆಯಾಗಿರುವುದಿಲ್ಲ.

ವಿದ್ಯಾರ್ಥಿನಿಲಯಗಳ ಕಟ್ಟಡ ನಿರ್ಮಾಣಕ್ಕೆ 2003–04, 2005–06ರಲ್ಲಿ ಪೂರ್ಣ ಹಣವು ಬಿಡುಗಡೆಯಾಗಿದ್ದರೂ 2004–05ನೇ ಸಾಲಿನಲ್ಲಿ ಈ ಉದ್ದೇಶಕ್ಕಾಗಿ ಯಾವುದೇ ಹಣ ಬಿಡುಗಡೆಯಾಗಿರುವುದಿಲ್ಲ.

ಅನುಬಂಧ

ಸಮಾಜ ಕಲ್ಯಾಣ ಇಲಾಖೆ

(ರೂ.ಲಕ್ಷಗಳಲ್ಲಿ)

		2003-04		2004-05		2005-06	
	ಯೋಜನೆ/ಲೆಕ್ಕ ಶೀರ್ಷಿಕೆ	ಕೇಂದ್ರ ಸರ್ಕಾರಕ್ಕೆ ಕಳುಹಿಸಿದ ಪ್ರಸ್ತಾವನೆ ಮೊತ್ತ	ಕೇಂದ್ರ ಸರ್ಕಾರದಿಂದ ರಾಜ್ಯ ಸರ್ಕಾರಕ್ಕೆ ಬಿಡುಗಡೆಯಾದ ಅನುದಾನ	ಕೇಂದ್ರ ಸರ್ಕಾರಕ್ಕೆ ಕಳುಹಿಸಿದ ಪ್ರಸ್ತಾವನೆ	ಕೇಂದ್ರ ಸರ್ಕಾರದಿಂದ ರಾಜ್ಯ ಸರ್ಕಾರಕ್ಕೆ ಬಿಡುಗಡೆಯಾದ ಅನುದಾನ	ಕೇಂದ್ರ ಸರ್ಕಾರಕ್ಕೆ ಕಳುಹಿಸಿದ ಮೊತ್ತ	ಕೇಂದ್ರ ಸರ್ಕಾರದಿಂದ ರಾಜ್ಯ ಸರ್ಕಾರಕ್ಕೆ ಬಿಡುಗಡೆಯಾದ ಅನುದಾನ
1	2	3	4	5	6	7	8
1	ವೈದ್ಯಕೀಯ ಮತ್ತು ಇಂಜಿನಿಯರಿಂಗ್ ಕಾಲೇಜುಗಳಲ್ಲಿ ಪ.ಜಾ ವಿದ್ಯಾರ್ಥಿಗಳಿಗೆ ಪುಸ್ತಕ ಭಂಡಾರ (ಕೇಂ.ಪು.ಯೋ) 2225-01-800-0-71			65.60	50.00	57.64	61.26
		4440.12	2432.23				
2	ಮೆಟ್ರಿಕ್ ನಂತರದ ವಿದ್ಯಾರ್ಥಿ ವೇತನ (ಕೇಂದ್ರ ಯೋಜನೆ) 225-01-277-0-78			9753.01	2649.58	9254.07	2590.74

1	2	3	4	5	6	7	8
3	ಅಶುದ್ಧ ವೃತ್ತಿಯಲ್ಲಿ ತೊಡಗಿರುವವರ ಮಕ್ಕಳಿಗಾಗಿ ಮೆಟ್ರಿಕ್ ಪೂರ್ವ ವಿದ್ಯಾರ್ಥಿ ವೇತನ (ಕೇ.ಪು.ಯೋ) 225-01-277-0-88	8.20		18.94			
4	ಪ.ಜಾತಿ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿನಿಲಯಗಳ ಕಟ್ಟಡ ನಿರ್ಮಾಣ (ಬಾಲಕರು+ಬಾಲಕಿಯರು) 4225-01-277-2-01	600.00	598.63	600.00	597.83	600.00	
5	ಪ್ರತಿಭಾವಂತ ಪ.ಜಾತಿಯ ವಿದ್ಯಾರ್ಥಿಗಳಿಗೆ ಪ್ರೋತ್ಸಾಹ (ಕೇಂ.ಯೋ) 2225-01-277-0-60			150.00		151.70	
6	ಅಸ್ಪೃಶ್ಯತಾ ನಿವಾರಣೆ (ಕೇಂ.ಪು.ಯೋ) 2225-01-800-0-112225-01-800-0-56	216.59					

1	2	3	4	5	6	7	8
7	ಸೆಮಿನಾರ್‌ಗಳು ಮತ್ತು ಕಮ್ಮಟಗಳನ್ನು ನಡೆಸುವುದು (ಕೇಂದ್ರ ಪುರಸ್ಕೃತ ಯೋಜನೆ) 2225-01-800-0-12	10.00					
8	1955ರ ಅಸ್ಪೃಶ್ಯತಾ ಅಪರಾಧದಳ ಅಧಿನಿಯಮಗಳ ಸಮಾಚರಣೆ ವ್ಯವಸ್ಥೆ (ಕೇಂ.ಪು.ಯೋ)2225-01-800-0-03	67.00		878.56	458.50	954.04	760.66
9	ದೌರ್ಜನ್ಯಕ್ಕೊಳಪಟ್ಟ ಪ.ಜಾತಿಯವರಿಗೆ ಸಹಾಯಧನ (ಕೇಂದ್ರ ಪುರಸ್ಕೃತ ಯೋಜನೆ) 2225-01-800-0-13	150.00					
10	ತರಬೇತಿ ಮತ್ತು ಸಂಬಂಧಪಟ್ಟ ಕಾರ್ಯಕ್ರಮಗಳು (ಕೇಂದ್ರ ಪುರಸ್ಕೃತ ಯೋಜನೆ) 2225-01-277-0-02	50.00	14.33	50.00		50.00	
11	ವಿಶೇಷ ಘಟಕ ಯೋಜನೆಯಡಿ ವಿಶೇಷ ಕೇಂದ್ರೀಯ ನೆರವು 2225-01-793-0-00 2225-01-191-1-02 (ಕೇಂದ್ರ ಯೋಜನೆ)	3495.78	2124.76	3845.35	2951.80	4845.78	2322.63
	ಒಟ್ಟು ಮೊತ್ತ	9037.69	5169.95	15361.46	6707.71	15913.23	5735.29

ಇಲಾಖೆಗೆ ಸಂಬಂಧಿಸಿದ ಕೇಂದ್ರ ಪುರಸ್ಕೃತ ಮತ್ತು ಕೇಂದ್ರವಲಯ ಕಾರ್ಯಕ್ರಮಗಳಡಿ ನಿಗದಿತ ಸಮಯಕ್ಕೆ ಸರಿಯಾಗಿ ಕೇಂದ್ರ ಸರ್ಕಾರಕ್ಕೆ ರಾಜ್ಯ ಸರ್ಕಾರದಿಂದ ಪ್ರಸ್ತಾವನೆಗಳನ್ನು ಕಳುಹಿಸಿರುತ್ತದೆ ಹಾಗೂ ಈ ದಿಸೆಯಲ್ಲಿ ಹಣ ಬಿಡುಗಡೆ ಮಾಡಲು ಕೋರಿ ನೆನಪೋಲೆಗಳನ್ನು ಸಹ ಬರೆಯಲಾಗಿದೆ. ಆದಾಗ್ಯೂ ಪ್ರಸ್ತಾಪಿತ ಪ್ರಸ್ತಾವನೆಯ ಅನುದಾನಕ್ಕೆ ಸಂಬಂಧಿಸಿದಂತೆ ಕೇಂದ್ರ ಸರ್ಕಾರ ಶೇಕಡಾ 20 ರಿಂದ 25 ರಷ್ಟು ಅನುದಾನವನ್ನು ಕಡಿತಗೊಳಿಸಿ ಹಣ ಬಿಡುಗಡೆ ಮಾಡುವುದು ಗಮನಾರ್ಹ.